# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ದಾಂಡೇಲಿ

**ಸಿ.ಸಿ ನಂಃ 73/2021**

**ಪಿರ್ಯಾದಿದಾರರುಃ ಕರ್ನಾಟಕ ಸರ್ಕಾರದ ಪರವಾಗಿ ರಾಮನಗರ ಪೋಲಿಸ್ ಠಾಣೆ**

**-ವಿರುದ್ಧ-**

**ಆರೋಪಿತರುಃ ಮಸಣು ತಂದೆ ಶಿಮಾನಿ ಚೌಧರಿ**
ವಯಸ್ಸುಃ 70 ವರ್ಷ, ಕೃಷಿ ಕೆಲಸ,
ಸಾಃ ಮಾಲುಂಬಾ, ಕೂಡಲಗಾಂವ, ತಾಃ ಜೋಯಿಡಾ (ಉ.ಕ)

## ದೋಷಾರೋಪಣೆ

ನಾನು **ಶ್ರೀಮತಿ. ರೋಹಿಣಿ ಡಿ ಬಸಾಪುರ** ಪ್ರ.ದ.ನ್ಯಾ.ದಂಡಾಧಿಕಾರಿಗಳು, ದಾಂಡೇಲಿ ಆದ ನಾನು ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಇಂತಿದೆಃ

ದಿನಾಂಕಃ 02-10-2020 ರಂದು ಮದ್ಯಾಹ್ನ 01-00 ಗಂಟೆಯ ಸುಮಾರಿಗೆ ರಾಮನಗರ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಮಾಲುಂಬಾ ಗ್ರಾಮದ ನಿವಾಸಿಯಾದ ಫಿರ್ಯಾದಿ ಇವರು ಕಳೆದ 10-12 ವರ್ಷಗಳಿಂದ ಗೋವಾದಲ್ಲಿ ಗೌಂಡಿ ಕೆಲಸ ಮಾಡಿಕೊಂಡಿದ್ದಾಗ ತಮ್ಮ ಮನೆ ಹಿತ್ತಲಿನ ಗಾಂವಟಾನ ಜಾಗದಲ್ಲಿದ್ದ ತೆಂಗಿನ ಮರಗಳ ತೆಂಗಿನ ಕಾಯಿಗಳನ್ನು ಫಿರ್ಯಾದಿಯವರ ಚಿಕ್ಕಪ್ಪ/ಆರೋಪಿಯಾದ ನೀವು ತೆಗೆಯುತ್ತಾ ಬಂದಿದ್ದು, ಈಗ ಕಳೆದ ಎರಡು ವರ್ಷಗಳಿಂದ ಮಾಲಾಂಬಾಕ್ಕೆ ಬಂದು ಉಳಿದುಕೊಂಡಿರುವ ಫಿರ್ಯಾದಿಯವರು ತೆಂಗಿನಕಾಯಿಗಳನ್ನು ತೆಗೆಯಲು ಹೋದಾಗ ಆರೋಪಿಯಾದ ನೀವು ಅವು ತನಗೆ ಸೇರಿರುವವು ಅಂತಾ ಗಲಾಟೆ ಮಾಡಿದ್ದು, ಫಿರ್ಯಾದಿಯವರು ಚಾಸಾ 4 ರವರನ್ನು ತೆಂಗಿನ ಗಿಡದ ಮೇಲೆ ಹತ್ತಿಸಿ ಕಾಯಿಗಳನ್ನು ತೆಗೆಸುತ್ತಿರುವಾಗ ಬಂದ ಆರೋಪಿತನು "ಇವು ನಿಮ್ಮಪ್ಪನ ಗಿಡಗಳೇನು" ಎಂದು ಕೇಳಿದಾಗ ಫಿರ್ಯಾದಿಯವರು

ತಮ್ಮ ಅಪ್ಪನ ಗಿಡಗಳ ಕಾಯಿಗಳನ್ನು ತೆಗೆಸುತ್ತಿರುವ ಬಗ್ಗೆ ಹೇಳಿದ್ದಕ್ಕೆ "ಪೋದ್ರಿಚಾ ನಿನಗೆ ತೋರಿಸುತ್ತೇನೆ ನಿಲ್ಲು" ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತಾ ಭಂಗಪಡಿಸುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುವಿರೆಂದು,

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಕಲ್ಲು ತೆಗೆದುಕೊಂಡು ಬೀಸಿ ಹೊಡೆದು ಫಿರ್ಯಾದಿಯವರ ಎಡಗಣ್ಣಿನ ಹುಬ್ಬಿನ ಭಾಗದಲ್ಲಿ ತಾಗಿ ತೀವ್ರ ಸ್ವರೂಪದ ರಕ್ತಗಾಯವಾಗಿ, ಕುಸಿದು ನೆಲದ ಮೇಲೆ ಬಿದ್ದ ಫಿರ್ಯಾದಿಯವರ ಮೂಗಿಗೆ ಪೆಟ್ಟಾಗಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 326 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುವಿರೆಂದು,

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಫಿರ್ಯಾದಿಯನ್ನು ಉದ್ದೇಶಿಸಿ "ಇನ್ನು ಇದಕ್ಕಿಂತ ಭಯಂಕರವಾಗಿ ತೋರಿಸುತ್ತೇನೆ" ಎಂದು ಜೀವ ಬೆದರಿಕೆ ಹಾಕುವ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಎಸಗಿರುವಿರೆಂದು ನಿಮ್ಮ ಮೇಲೆ ಆರೋಪಣೆ ಮಾಡಲಾಗಿದೆ.

ಈ ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಿರ್ದೇಶಿಸಲಾಗಿದೆ.

ದಿನಾಂಕಃ 22-11-2023

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ದಾಂಡೇಲಿ